ಜಪಾನಿನ ಕಥೆಗಳು

# ಮಮೋತಾರಾ

ಬಂಗಾಳಿ ಮೂಲ : **ರಾಜಕೃಷ್ಣ ಭಟ್ಟಾಚಾರ್ಯ** | ಚಿತ್ರ : **ಜುಂಕೋ ಭಟ್ಟಾಚಾರ್ಯ** | ಕನ್ನಡಾನುವಾದ : **ಗಿರಿಜಾದೇವಿ**



ಬಹಳ ಕಾಲದ ಹಿಂದೆ ಒಂದು ಸಣ್ಣ ನದಿಯ ದಡದಲ್ಲಿ, ಕಾಡಿನ ಸಮೀಪ ಒಂದು ಗುಡಿಸಲಿನಲ್ಲಿ ಮುದಿ ದಂಪತಿ ವಾಸವಾಗಿದ್ದರು. ಮುದುಕ ಹುಲ್ಲು ಕೊಯ್ದು ತರಲು ಕಾಡಿಗೆ ಹೋಗಿದ್ದ. ಮುದುಕಿ ಬಟ್ಟೆಗಳನ್ನು ಒಗೆದು ಶುಭ್ರ ಗೊಳಿಸಲು ನದಿಗೆ ಬಂದಳು. ಮುದುಕಿ ಬಟ್ಟೆಗಳನ್ನು ಒಗೆಯುತ್ತಿರುವಾಗ, ನದಿಯಲ್ಲಿ ಒಂದು ದೊಡ್ಡದಾದ ಸುಂದರ ಪೀಚ್‌ಹಣ್ಣು ತೇಲಿಕೊಂಡು ತನ್ನತ್ತಲೇ ಬರುತ್ತಿರುವುದನ್ನು ನೋಡಿದಳು. ಅಚ್ಚರಿಗೊಂಡ ಮುದುಕಿ ಅದನ್ನು ಎತ್ತಿಕೊಂಡು ಮನೆಗೆ ಬಂದಳು. ಮುದುಕ, ಮುದುಕಿ ಇಬ್ಬರೂ ಪೀಚ್ ಹಣ್ಣನ್ನು ಎರಡು ಭಾಗವಾಗಿ ಮಾಡುತ್ತಲೇ, ಅದರೊಳಗೆ ಒಂದು ಸಣ್ಣ ಗಂಡುಮಗು ಇರುವುದನ್ನು ನೋಡಿ ಆನಂದಿತರಾದರು. ಮಗುವನ್ನು '**ಮಮೋತಾರಾ**' (ಜಪಾನಿನಲ್ಲಿ 'ಮಮೋ' ಎಂದರೆ ಪೀಚ್‌ಹಣ್ಣು) ಎಂದು ಕರೆದರು. ಮಗು ಬೆಳೆದು ದೊಡ್ಡದಾಯಿತು. ಆ ಪ್ರಾಂತದಲ್ಲಿ ದೈತ್ಯರ ಹಾವಳಿಯ ವಿಷಯ ಮಮೋತಾರಾನಿಗೆ ತಿಳಿಯಿತು. ದೈತ್ಯರು ತುಂಬಾ ಕ್ರೂರಿಗಳೂ, ದುರಾಚಾರಿಗಳೂ ಆಗಿದ್ದರು. ಅವರ ಬಳಿ ಹೇರಳವಾದ ಧನಸಂಪತ್ತೂ ಇದ್ದಿತು. ಅವರೆಲ್ಲರೂ ಒಂದು ದ್ವೀಪದಲ್ಲಿ ಒಟ್ಟಿಗೆ ವಾಸಿಸುತ್ತಿದ್ದರು. ಮಮೋತಾರಾ ಈ ದೈತ್ಯರನ್ನು ಸದೆಬಡಿಯುವ ನಿರ್ಧಾರ ಮಾಡಿದ. ದೈತ್ಯರೊಂದಿಗೆ ಹೋರಾಡಲು ಅವನು ಹೊರಟಿರುವುದನ್ನು ತಿಳಿದ ಮುದುಕಿ, ಬಹು ರುಚಿಕರವಾದ ಕರಿದಾಂಗೋ (ಜಪಾನಿನ ಪ್ರಸಿದ್ಧ ಸಿಹಿತಿಂಡಿ) ತಯಾರಿಸಿಕೊಟ್ಟಳು. ಅವನು ಆ ತಿನಿಸನ್ನು ವಸ್ತ್ರದಲ್ಲಿ ಗಂಟು ಕಟ್ಟಿಕೊಂಡು ಪ್ರಯಾಣ ಪ್ರಾರಂಭಿಸಿದ. ದಾರಿಯಲ್ಲಿ ಒಂದು ನಾಯಿ ಎದುರಿಗೆ ಬಂತು. ಅದು ಮಮೋತಾರಾನನ್ನು ವಿಚಾರಿಸಿತು, ''ನಿನ್ನ ಬಟ್ಟೆ ಗಂಟಿನಲ್ಲಿ ಏನಿದೆ ?'' ಅವನು ಹೇಳಿದ, ''ಇವು ಜಪಾನಿನ ಪ್ರಸಿದ್ಧ ಕಿರಿದಾಂಗೋ.'' ಅವನ ಮಾತು ಕೇಳಿದ ನಾಯಿ ಹೇಳಿತು, ''ನನಗೆ ಒಂದು ಕಿರಿದಾಂಗೋ ಕೊಡುತ್ತೀಯಾ? ನೀನು ಕೊಡುವುದಾದರೆ ನಾನೂ ನಿನ್ನ ಜತೆಯಲ್ಲಿಯೇ ಬರುತ್ತೇನೆ.'' ಕಿರಿದಾಂಗೋ ತಿಂದ ನಾಯಿ ತನ್ನ ಮಾತಿನಂತೆ ಮಮೋತಾರಾನೊಂದಿಗೇ ನಡೆಯತೊಡಗಿತು. ಹೀಗೆಯೇ ಸ್ವಲ್ಪ ದೂರ ನಡೆಯುವಷ್ಟರಲ್ಲಿ ಒಂದು ಕೋತಿ ಎದುರಾಯಿತು. ಅದೂ ಸಹ ನಾಯಿಯಂತೆಯೇ ಮಮೋತಾರಾನನ್ನು ಕೇಳಿ, ಕಿರಿದಾಂಗೋ ಪಡೆದು ತಿಂದಿತು. ಅದರ ರುಚಿಗೆ ಕೋತಿ ಬಹಳವಾಗಿ ಆನಂದಿಸಿತು. ಅದು ಮಮೋತಾರಾ ಮತ್ತು ನಾಯಿಗೆ ಹೇಳಿತು, ''ನಾನೂ ಸಹ ನಿಮ್ಮೊಂದಿಗೇ ಬರುತ್ತೇನೆ.'' ನಾಯಿ ಮತ್ತು ಕೋತಿಯೊಂದಿಗೆ ಪ್ರಯಾಣ ಮುಂದುವರೆಸಿದ ಮಮೋತಾರಾಗೆ ಒಂದು ಕಿಜಿ ಪಕ್ಷಿ (ಜಪಾನಿನ ಒಂದು ಸುಂದರ ಪಕ್ಷಿ) ಎದುರಾಯಿತು. ಇದೂ ಸಹ ಕಿರಿದಾಂಗೋ ಕೇಳಿ ಪಡೆದು ತಿಂದು, ಸಂತೋಷದಿಂದ ನಾಯಿ ಮತ್ತು ಕೋತಿಯೊಂದಿಗೆ ಹಾರುತ್ತಾ, ಎಗರುತ್ತಾ ಮಮೋತಾರಾನನ್ನು ಅನುಸರಿಸಿತು. ಒಂದು ಸಣ್ಣನದಿಯನ್ನು ದಾಟಿದ ಮಮೋತಾರಾ, ನಾಯಿ, ಕೋತಿ ಮತ್ತು ಕಿಜಿ ಪಕ್ಷಿಯೊಂದಿಗೆ ದೈತ್ಯರ ದ್ವೀಪವನ್ನು ಪ್ರವೇಶಿಸಿದ. ಇವರು ಬರುತ್ತಿರುವುದನ್ನು ದೂರದಿಂದಲೇ ನೋಡಿದ ದೈತ್ಯರೂ ಸಹ ಇವರನ್ನು ಎದುರಿಸಲು ತಯಾರಾದರು. ದೈತ್ಯರೊಂದಿಗೆ ಕಾಳಗ ಪ್ರಾರಂಭವಾಯಿತು. ಕೋತಿ ದೈತ್ಯರ ಶರೀರಗಳನ್ನು ಪರಚಿ ಗಾಯಮಾಡಿತು. ನಾಯಿಯಾದರೋ ಅವರನ್ನು ಎಲ್ಲೆಂದರಲ್ಲಿ ಕಡಿಯತೊಡಗಿತು. ಕಿಜಿ ಪಕ್ಷಿ ಹಾರಾಡುತ್ತಾ, ಅವರೆಲ್ಲರ ಕಣ್ಣುಗಳನ್ನು ಕುಕ್ಕಿಹಾಕಿತು. ಇವುಗಳ ನೇತೃತ್ವವನ್ನು ವಹಿಸಿದ ಮಮೋತಾರಾ ಯಶಸ್ವಿಯಾಗಿ ದೈತ್ಯರೊಂದಿಗೆ ಹೋರಾಡಿದ. ಕೊನೆಗೆ ದೈತ್ಯರು ಸೋಲೊಪ್ಪಿಕೊಂಡು, ಮಮೋತಾರಾನ ಕ್ಷಮೆ ಕೇಳಿದರು. ತಾವು ಮತ್ತೆಂದೂ ಜನರನ್ನು ಹಿಂಸಿಸಿ ಅನಾಚಾರ ಮಾಡುವುದಿಲ್ಲವೆಂದು ಮಾತುಕೊಟ್ಟರು. ಜಯಶೀಲನಾದ ಮಮೋತಾರಾ ದೈತ್ಯರ ಸಮಸ್ತ ಗುಪ್ತಧನವನ್ನು ಹೊತ್ತುಕೊಂಡು, ನಾಯಿ, ಕೋತಿ ಮತ್ತು ಕಿಜಿ ಪಕ್ಷಿಯೊಂದಿಗೆ ಬಹಳ ಸಂತೋಷದಿಂದ ತನ್ನ ಹಳ್ಳಿಗೆ ಹಿಂದಿರುಗಿದ. ✿

